ದಿನಾಂಕಃ 28/10/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಮ್ ಜಿ ಎಚ್ ವಕೀಲರಿಂದಃ

3. ನಾನು ಶಾಲೆಯನ್ನು ಪಿ ಯು ಸಿ ವರೆಗೆ ಓದಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಓದಲು ಮತ್ತು ಬರೆಯಲು ಬರುತ್ತದೆ. ಈ ದಾವೆಯನ್ನು ಹಾಕಲು ಮಾಹಿತಿಯನ್ನು ನಾನೇ ವಕೀಲರಿಗೆ ಕೊಟ್ಟಿರುತ್ತೇನೆ. ದಾವಾ ಹಾಕುವ ಪೂರ್ವದಲ್ಲಿ ವಾದ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ಈ ದಾವೆಯನ್ನು ಪಾಲು ಕೇಳಿ ಹಾಕಿದ್ದೇನೆ. ಮೂರು ಹೊಲಗಳ ಮತ್ತು ಮೂರು ಮನೆಗಳ ಮೇಲೆ ಈ ದಾವೆಯನ್ನು ನಾನು ಹಾಕಿರುತ್ತೇನೆ. ಹೊಲದ ಸರ್ವೇ ನಂಬರ 6/3 ಬಿ, 3/1 ಬಿ+3/1 ಇವೆರಡೆ ಸರ್ವೇ ನಂಬರಗಳ ಹೊಲದ ಮೇಲೆ ಕೇಸ ಹಾಕಿರುತ್ತೇನೆ. 6/3 ಬಿ ಸ್ವತ್ತು ವೀರಭದ್ರಯ್ಯ ತಂದೆ ಫಕೀರಯ್ಯ ಹಿರೇಮಠ ಅವರ ಹೆಸರಿನಲ್ಲಿದೆ. 3/1 ಬಿ+3/1 ಸದ್ಯ ನನ್ನ ತಂದೆಯ ಹೆಸರಿನಲ್ಲಿದೆ. ಮನೆ ನಂಬರ 507 ಮತ್ತು 545 ಇನ್ನುಳಿದ ನಂಬರ ನನಗೆ ನೆನಪಿಲ್ಲ. ನನ್ನ ತಂದೆಯ ಹೆಸರು ವೀರಭದ್ರಯ್ಯ. ದಾವಾ ಆಸ್ತಿಗಳು ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು. ದಾವಾ ಆಸ್ತಿಗಳು ನನ್ನ ತಂದೆ ವೀರಭದ್ರಯ್ಯ ಅವರಿಗೆ ಸಂಬಂಧಪಟ್ಟಿರುತ್ತವೆ ಎಂದರೆ ಸಾಕ್ಷಿ ವೀರಭದ್ರಯ್ಯ ಹಾಗೂ ನನ್ನ ಜನಕ ತಂದೆ ರಾಚಯ್ಯ ಅವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಆ ಸಂಬಂಧ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ.

4. ನಮ್ಮ ಮನೆತನದ ಮೂಲ ಪುರುಷ ಈರಯ್ಯ. ಸದರಿಯವರಿಗೆ ಇಬ್ಬರು ಮಕ್ಕಳು. ಅವರೆಂದರೆ, ಬಸಯ್ಯ ಮತ್ತು ಫಕೀರಯ್ಯ. ಸದರಿಯವರಲ್ಲಿ ಬಸಯ್ಯನಿಗೆ ಮೂರು ಜನ ಮಕ್ಕಳು. ಅವರೆಂದರೆ, ಈರಯ್ಯ, ಸೀಮಯ್ಯ ಮತ್ತು ರಾಚಯ್ಯ. ವೀರಭದ್ರಯ್ಯ ಸಹ ಬಸಯ್ಯನ ಮಗ ಎಂದರೆ ಸರಿ. ಫಕೀರಯ್ಯನಿಗೆ ಒಬ್ಬನೇ ಮಗ. ಆತನ ಹೆಸರು ವೀರಭದ್ರಯ್ಯ. ಫಕೀರಯ್ಯನಿಗೆ ಯಾವುದೇ ಸಂತಾನ ಇರಲಿಲ್ಲ ಎಂದರೆ ಸರಿ. ಆ ಕಾರಣ ವೀರಭದ್ರಯ್ಯನನ್ನು ದತ್ತಕ ಪಡೆದಿದ್ದರು ಎಂದು ನುಡಿಯುತ್ತಾರೆ. ದತ್ತಕ ಪತ್ರ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ಈರಯ್ಯನಿಗೆ ಮೂರು ಜನ ಮಕ್ಕಳು. ಅವರೆಂದರೆ, ಚಂದ್ರಶೇಖರಯ್ಯ, ಮುರುಗಯ್ಯ ಮತ್ತು ಬಸವಣ್ಣಯ್ಯ. ಅವರನ್ನು ಈ ದಾವಾದಲ್ಲಿ ಪಕ್ಷಕಾರರನ್ನಾಗಿ ಮಾಡಿದ್ದೀರಾ ಎಂದರೆ ಇಲ್ಲ. ಅವರೆಲ್ಲ ತೀರಿಕೊಂಡಿದ್ದಾರರೆ. ಸೀಮಯ್ಯನಿಗೆ ಒಬ್ಬನೇ ಮಗ. ಗಂಗಯ್ಯ ಆತನನ್ನು ಈ ದಾವಾದಲ್ಲಿ ಪಕ್ಷಕಾರರನ್ನಾಗಿ ಮಾಡಿದ್ದೀರಾ ಎಂದರೆ ಇಲ್ಲ. ಆತ ತೀರಿಕೊಂಡಿದ್ದಾನೆ. ಅವರೆಲ್ಲ ತೀರಿಕೊಂಡಿದ್ದಾರೆ ಎಂದು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ. ಅವರ

ವಾರಸಾದಾರರು ಇದ್ದಾರೆ. ಸದರಿ ವಾರಸಾದಾರರನ್ನು ಈ ದಾವಾದಲ್ಲಿ ಪಕ್ಷಕಾರರಾಗಿ ಮಾಡಬೇಕು ಎಂದರೆ ಸಾಕ್ಷಿ ನನ್ನ ಆಸ್ತಿಯ ಮೇಲೆ ದಾವಾ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಚಂದ್ರಶೇಖರಯ್ಯನಿಗೆ ಐದು ಜನ ಮಕ್ಕಳು. ಅವರೆಂದರೆ, ಗಂಗಾಧರಯ್ಯ, ಷಣ್ಮುಕಯ್ಯ, ಗುರುಪಾದಯ್ಯ, ಇನ್ನಿಬ್ಬರ ಹೆಸರು ನನಗೆ ನೆನಪಿಲ್ಲ. ಮುರುಗಯ್ಯನಿಗೆ ಇಬ್ಬರು ಮಕ್ಕಳು. ಅವರ ಹೆಸರು ಗೊತ್ತಿಲ್ಲ. ಬಸವಣ್ಣಯ್ಯನಿಗೆ ಮಕ್ಕಳಿಲ್ಲ. ಗಂಗಯ್ಯನಿಗೆ ಒಬ್ಬನೇ ವಾರಸುದಾರ. ಆತನ ಹೆಸರು ರವಿ. ಹೆಂಡತಿಯ ಹೆಸರು ಪಾರ್ವತಿ. ನಾನು ಹಾಜರು ಪಡಿಸಿದ ವಂಶಾವಳಿಯಲ್ಲಿ ಫೋತಿಯಾದವರ ವಾರಸುದಾರರನ್ನು ತೋರಿಸಿಲ್ಲ ಎಂದರೆ ಸರಿ. ಫೋತಿಯಾದ ಬಗ್ಗೆ ವಂಶಾವಳಿಯಲ್ಲಿ ಕಾಣಿಸಿಲ್ಲ ಎಂದರೆ ಸರಿ.

5. ರಾಚಯ್ಯ ಜನಕ ತಂದೆ ಎಂದು ತೋರಿಸಲು ಮಾನ್ಯ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ರಾಚಯ್ಯನಿಗೆ ನಿಜಗುಣಯ್ಯ ಮತ್ತು ನಾನು ಒಟ್ಟು ಇಬ್ಬರು ಮಕ್ಕಳು. ಹಾಲವ್ವ ರಾಚಯ್ಯನ 2 ನೇ ಹೆಂಡತಿ ಎಂದು ತೋರಿಸಲು ಕಾಗದ ಪತ್ರ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ದಿಃ 13-12-1998 ರಲ್ಲಿ ರಾಚಯ್ಯ ಮತ್ತು ಬಸಯ್ಯ ಅವರು ಸೇರಿಕೊಂಡು ವಾಟ್ನಿ ಮಾಡಿಕೊಂಡಿರುವ ವಿಷಯ ನನಗೆ ಗೊತ್ತಿಲ್ಲ. ಸದರಿ ವಾಟ್ನಿ ಪ್ರಕಾರ ಡ ನಂಬರ 2447 ರ ಮೇಲೆ ನಮ್ಮನ್ನು ಬಿಟ್ಟು ವಾಟ್ನಿ ಮಾಡಿಕೊಂಡಿದ್ದಾರೆ ಎಂದು ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಇಲ್ಲ. ಕಾರಣ ನಾನು ಬೆಳೆದಿದ್ದೆಲ್ಲ ಧಾರವಾಡದಲ್ಲಿ ಹಾಗಾಗಿ ಎಲ್ಲ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಡ ನಂಬರ 2447 ರ ಮೇಲೆ ಎ ಸಿ ನ್ಯಾಯಾಲಯದಲ್ಲಿ ಆರ್ ಟಿ ಎಸ್ ಅಪೀಲ ನಂಬರ 55/23-24 ರಂತೆ ಮೇಲ್ಮನವಿ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಿಜಗಣಯ್ಯ ಹಾಜರಾಗಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ದಿಃ 01-08-2024 ರಂದು ಸದರಿ ಪ್ರಕರಣವನ್ನು ಎ ಸಿ ನ್ಯಾಯಾಲಯದವರು 25 ವರ್ಷ ವಿಳಂಬವಾಗಿ ಅರ್ಜಿ ಸಲ್ಲಿಸಲಾಗಿದೆ ಎಂದು ಸದರಿ ಅರ್ಜಿಯನ್ನು ವಜಾ ಮಾಡಿದ್ದರು ಎಂದರೆ ಸರಿ. ವೀರಭದ್ರಯ್ಯನ ಆಸ್ತಿ ಮೇಲೆ ಆರ್ ಟಿ ಎಸ್ ಅಪೀಲ 56/23-24 ರಂತೆ ಪ್ರಕರಣದ ದಾಖಲು ಮಾಡಿದ್ದೇವು ಎಂದರೆ ಸರಿ. ದಿಃ 01-08-2024 ರಂದು ಸದರಿ ಪ್ರಕರಣವನ್ನು ಎ ಸಿ ನ್ಯಾಯಾಲಯದವರು 20 ವರ್ಷ ವಿಳಂಬವಾಗಿ ಅರ್ಜಿ ಸಲ್ಲಿಸಲಾಗಿದೆ ಎಂದು ಸದರಿ ಅರ್ಜಿಯನ್ನು ವಜಾ ಮಾಡಿದ್ದರು ಎಂದರೆ ಸರಿ. ವಾಟ್ನಿ ಮಾಡಿಕೊಂಡ ವಿಚಾರ ನಿಮಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.